**Re.No. D. 221**

भारत का राजपत्र
The Gazette of India

# ಭಾರತ ರಾಜಪತ್ರ

**(Extraordinary)**
(ವಿಶೇಷ ಸಂಚಿಕೆ)

**भाग IX अनुभाग 1**
**PART IX SECTION 1**
ಭಾಗ **IX** ವಿಭಾಗ **1**

प्राधिकार से प्रकाशित
**Published by Authority**
ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ

| | | | |
|---|---|---|---|
| सं 1<br>No.1<br>ಸಂಖ್ಯೆ 1 | नई दिल्ली, सोमवार, मार्च 29, 1993<br>New Delhi, Monday, March 29, 1993<br>ನವದೆಹಲಿ, ಸೋಮವಾರ, ಮಾರ್ಚ್ 29, 1993 | चैत्र 09, 1915 (शक)<br>Chaitra 06, 1915 (saka)<br>ಚೈತ್ರ 09, 1915 (ಶಕ) | खंड.14<br>Vol. 14<br>ಸಂಪುಟ. 14 |


**Ministry of Law, Justice & Company Affairs**
(Legislative Department)
New Delhi, 29th March, 1993

**ಕಾನೂನು, ನ್ಯಾಯ ಮತ್ತು ಕಂಪನಿ ವ್ಯವಹಾರಗಳ ಮಂತ್ರಾಲಯ**
**(ವಿಧಾಯೀ ಇಲಾಖೆ)**
**ನವದೆಹಲಿ, 29ನೇ ಮಾರ್ಚ್, 1993**

The Translation in Kannada of the following Acts, namely:- (1) The Payment of Wages Act, 1936 (2) The Contempt of Courts Act, 1971 (3) The Special Marriage Act, 1954 (4) The Cattle Trespass Act, 1871 (5) The Minimum Wages Act, 1948 (6) The International Airports Authority Act, 1971 (7) The Scheduled Castes and the Scheduled Tribes (Prevention of Atrocities) Act, 1989 (8) The Registration Act, 1908 (9) The Police Act, 1861 (10) The Legal Services Authorities Act, 1987 (11) The Environment (Protection) Act, 1986 (12) The Ancient Monuments and Archaeological Sites and Remains Act, 1958 (13) The Explosives Act, 1884 (14) The Equal Remuneration Act, 1976 (15) The Probation of Offenders Act, 1958 (16) The Central Reserve Police Force Act, 1949 (17) The Conservation of foreign Exchange And Prevention of Smuggling Activities Act, 1974-are hereby published under the authority of the President and shall be deemed to be authoritative text thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ:– (1) ಮಜೂರಿ ಸಂದಾಯ ಅಧಿನಿಯಮ, 1936 (2) ನ್ಯಾಯಾಲಯ ನಿಂದನೆ ಅಧಿನಿಯಮ, 1971 (3) ವಿಶೇಷ ವಿವಾಹ ಅಧಿನಿಯಮ, 1954 (4) ಜಾನುವಾರು ಅತಿಕ್ರಮ ಪ್ರವೇಶ ಅಧಿನಿಯಮ, 1871 (5) ಕನಿಷ್ಠ ಮಜೂರಿ ಅಧಿನಿಯಮ, 1948 (6) ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ ಅಧಿನಿಯಮ, 1971 (7) ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮ, 1989 (8) ನೋಂದಣಿ ಅಧಿನಿಯಮ, 1908 (9) ಪೊಲೀಸು ಅಧಿನಿಯಮ, 1861 (10) ಕಾನೂನು ಸೇವಾ ಪ್ರಾಧಿಕಾರ ಅಧಿನಿಯಮ, 1987 (11) ಪರಿಸರ (ಸಂರಕ್ಷಣೆ) ಅಧಿನಿಯಮ, 1986 (12) ಪ್ರಾಚೀನ ಸ್ಮಾರಕ ಮತ್ತು ಪುರಾತತ್ವ ಸ್ಥಳ ಮತ್ತು ಅವಶೇಷ ಅಧಿನಿಯಮ, 1958 (13) ಸ್ಫೋಟಕ ಅಧಿನಿಯಮ, 1884 (14) ಸಮಾನ ಪರಿಶ್ರಮ ಧನ ಅಧಿನಿಯಮ, 1976 (15) ಅಪರಾಧಿಗಳ ಪರಿವೀಕ್ಷಣಾ ಅಧಿನಿಯಮ, 1958 (16) ಕೇಂದ್ರ ರಿಸರ್ವ್ ಪೊಲೀಸು ದಳ ಅಧಿನಿಯಮ, 1949 (17) ವಿದೇಶೀ ವಿನಿಮಯ ಸಂರಕ್ಷಣೆ ಮತ್ತು ಕಳ್ಳಸಾಗಣೆ ಚಟುವಟಿಕೆ ಪ್ರತಿಬಂಧ ಅಧಿನಿಯಮ, 1974– ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973 ರ 50) ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇದನ್ನು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

## ಸಮಾನ ಪರಿಶ್ರಮಧನ ಅಧಿನಿಯಮ, 1976

## (1976ರ ಸಂಖ್ಯೆ 25)

[11ನೇ ಫೆಬ್ರವರಿ, 1976.]

ಪುರುಷ ಮತ್ತು ಮಹಿಳಾ ಕೆಲಸಗಾರರಿಗೆ ಸಮಾನ ಪರಿಶ್ರಮಧನವನ್ನು ಸಂದಾಯ ಮಾಡುವ ಬಗ್ಗೆ ಮತ್ತು ನಿಯೋಜನೆಯ ವಿಷಯದಲ್ಲಿ ಲಿಂಗಭೇದದ ಕಾರಣದಿಂದಾಗಿ ಮಹಿಳೆಯರ ವಿರುದ್ಧ ಮಾಡಲಾಗುವ ತಾರತಮ್ಯವನ್ನು ಪ್ರತಿಬಂಧಿಸುವ ಬಗ್ಗೆ ಹಾಗೂ ಅದಕ್ಕೆ ಸಂಬಂಧಿಸಿದ ಅಥವಾ ಪ್ರಾಸಂಗಿಕವಾದ ವಿಷಯಗಳ ಬಗ್ಗೆ ಉಪಬಂಧಿಸುವ ಅಧಿನಿಯಮ.

ಭಾರತ ಗಣರಾಜ್ಯದ ಇಪ್ಪತ್ತೇಳನೇ ವರ್ಷದಲ್ಲಿ ಸಂಸತ್ತಿನಿಂದ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

### ಅಧ್ಯಾಯ I

### ಪ್ರಾರಂಭಿಕ

1. **ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಸಮಾನ ಪರಿಶ್ರಮಧನ

ಅಧಿನಿಯಮ, 1976 ಎಂದು ಕರೆಯತಕ್ಕದ್ದು.

(2) ಇದು, ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಈ ಅಧಿನಿಯಮವು ಅನುಮೋದಿತವಾದ ದಿನಾಂಕದಿಂದ ಮೂರು ವರ್ಷಗಳಿಗೆ ಮೀರದಂತೆ, ಕೇಂದ್ರ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆ ಮೂಲಕ ಗೊತ್ತುಪಡಿಸಬಹುದಾದಂಥ *ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ಬೇರೆ ಬೇರೆ ಕಾರ್ಯಸಂಸ್ಥೆಗಳಿಗೆ ಮತ್ತು ಬೇರೆ ಬೇರೆ ನಿಯೋಜನೆಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

2. **ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ,–

(ಎ) "ಸಮುಚಿತ ಸರ್ಕಾರ" ಎಂದರೆ:–

---

* ದಿನಾಂಕ: 6ನೇ ಮಾರ್ಚ್, 1976 ಅಧಿಸೂಚನೆ ಸಂಖ್ಯೆ. ಎಸ್.ಓ.175 (ಇ)ಯ ಮೂಲಕ 8ನೇ ಮಾರ್ಚ್ 1976ರ ಭಾರತ ರಾಜಪತ್ರ, ವಿಶೇಷ ಸಂಚಿಕೆ, ಭಾಗ II, ಪ್ರಕರಣ 3(ii)ನ್ನು ನೋಡಿ.

(i) ಕೇಂದ್ರ ಸರ್ಕಾರ ಅಥವಾ ರೈಲ್ವೆ ಆಡಳಿತದ ಅಧಿಕಾರದ ಮೂಲಕ ಅಥವಾ ಅದರ ಮೇರೆಗೆ ಮಾಡಿದ ಯಾವುದೇ ನಿಯೋಜನೆಯ ಸಂಬಂಧದಲ್ಲಿ, ಅಥವಾ ಕೇಂದ್ರ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಸ್ಥಾಪಿತವಾದ ಬ್ಯಾಂಕಿಂಗ್ ಕಂಪನಿ, ಗಣಿ, ತೈಲ ನಿಕ್ಷೇಪ ಅಥವಾ ಮುಖ್ಯ ಬಂದರು ಅಥವಾ ಯಾವುದೇ ನಿಗಮದ ಸಂಬಂಧದಲ್ಲಿ, ಕೇಂದ್ರ ಸರ್ಕಾರ; ಮತ್ತು

(ii) ಇತರ ಯಾವುದೇ ನಿಯೋಜನೆಯು ಸಂಬಂಧದಲ್ಲಿ, ರಾಜ್ಯ ಸರ್ಕಾರ;

(ಬಿ) "ಈ ಅಧಿನಿಯಮದ ಪ್ರಾರಂಭ" ಎಂದರೆ, ಯಾವುದೇ ಕಾರ್ಯಸಂಸ್ಥೆ ಅಥವಾ ನಿಯೋಜನೆಯ ಸಂಬಂಧದಲ್ಲಿ, ಆ ಕಾರ್ಯಸಂಸ್ಥೆ ಅಥವಾ ನಿಯೋಜನೆಗೆ ಸಂಬಂಧಿಸಿದಂತೆ ಈ ಅಧಿನಿಯಮವು ಜಾರಿಗೆ ಬಂದ ದಿನಾಂಕ;

(ಸಿ) "ನಿಯೋಜಕ" ಎಂಬುದಕ್ಕೆ ಉಪದಾನ ಸಂದಾಯ ಅಧಿನಿಯಮ, 1972 (1972ರ 39)ರ 2ನೇ ಪ್ರಕರಣದ (ಎಫ್) ಖಂಡದಲ್ಲಿ ಅದಕ್ಕೆ ಕೊಡಲಾದ ಅರ್ಥವಿರುತ್ತದೆ;

(ಡಿ) "ಪುರುಷ" ಮತ್ತು "ಮಹಿಳೆ" ಎಂದರೆ, ಅನುಕ್ರಮವಾಗಿ, ಯಾವುದೇ ವಯಸ್ಸಿನ ಪುರುಷ ಮತ್ತು ಮಹಿಳಾ ವ್ಯಕ್ತಿ;

(ಇ) "ಅಧಿಸೂಚನೆ" ಎಂದರೆ, ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿತವಾದ ಅಧಿಸೂಚನೆ;

(ಎಫ್) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಮೇರೆಗೆ ರಚಿತವಾದ ನಿಯಮಗಳ ಮೂಲಕ ನಿಯಮಿಸಲಾದುದು;

(ಜಿ) "ಪರಶ್ರಮಧನ" ಎಂದರೆ, ನಿಯೋಜಿತನಾದ ವ್ಯಕ್ತಿಗೆ ಅವನ ನಿಯೋಜನೆಗೆ ಸಂಬಂಧಿಸಿದಂತೆ ಅಥವಾ ಅಂಥ ನಿಯೋಜನೆಯಲ್ಲಿ ಮಾಡಲಾದ ಕೆಲಸಕ್ಕೆ ಸಂಬಂಧಿಸಿದಂತೆ ನಿಯೋಜನೆಯ ಕರಾರಿನ ನಿಬಂಧನೆಗಳು, ಅವು ವ್ಯಕ್ತವಾಗಿರಲಿ ಅಥವಾ ಇಂಗಿತವಾಗಿರಲಿ ನೆರವೇರಿದರೆ, ಹಣದ ರೂಪದಲ್ಲಿ ಅಥವಾ ವಸ್ತು ರೂಪದಲ್ಲಿ ಸಂದಾಯವಾಗಬೇಕಾದ ಯಾವುದೇ ಮೂಲ ಮಜೂರಿ ಅಥವಾ ಸಂಬಳ ಮತ್ತು ಯಾವುವೆ ಹೆಚ್ಚಿನ ಉಪಲಬ್ಧಿಗಳು;

(ಹೆಚ್) "ಅದೇ ಕೆಲಸ ಅಥವಾ ಅದೇ ರೀತಿಯ ಕೆಲಸ" ಎಂದರೆ, ಒಂದೇ ರೀತಿಯ ಕೆಲಸದ ಸ್ಥಿತಿಗತಿಗಳಲ್ಲಿ ಪುರುಷ ಅಥವಾ ಮಹಿಳೆಯು ಮಾಡುವ ಕೆಲಸದ ಸಂಬಂಧದಲ್ಲಿ ಅಗತ್ಯವಾದ ಕುಶಲತೆ, ಪರಿಶ್ರಮ ಮತ್ತು ಜವಾಬ್ದಾರಿಗಳು ಒಂದೇ ರೀತಿಯದಾಗಿರುವ ಕೆಲಸ ಮತ್ತು

ಪುರುಷನಿಂದ ಮತ್ತು ಮಹಿಳೆಯಿಂದ ಅಪೇಕ್ಷಿತವಾದ ಕುಶಲತೆ, ಪರಿಶ್ರಮ ಮತ್ತು ಜವಾಬ್ದಾರಿಗಳಲ್ಲಿ ವ್ಯತ್ಯಾಸಗಳು ಏನಾದರೂ ಇದ್ದರೆ, ಅವುಗಳು ನಿಯೋಜನೆಯ ನಿಬಂಧನೆ ಮತ್ತು ಷರತ್ತುಗಳಿಗೆ ಸಂಬಂಧಿಸಿದಂತೆ ಗಣನೀಯ ಮಹತ್ವದ್ದಾಗಿರುವುದಿಲ್ಲ;

(ಐ) "ಕೆಲಸಗಾರ" ಎಂದರೆ, ಯಾವ ಕಾರ್ಯಸಂಸ್ಥೆ ಅಥವಾ ನಿಯೋಜನೆಯ ಸಂಬಂಧದಲ್ಲಿ ಈ ಅಧಿನಿಯಮವು ಜಾರಿಗೆ ಬಂದಿರುವುದೋ ಆ ಯಾವುದೇ ಕಾರ್ಯಸಂಸ್ಥೆಯಲ್ಲಿನ ಅಥವಾ ನಿಯೋಜನೆಯಲ್ಲಿನ ಕೆಲಸಗಾರ;

(ಜೆ) ಈ ಅಧಿನಿಯಮದಲ್ಲಿ ಉಪಯೋಗಿಸಲಾಗಿದ್ದು ಪರಿಭಾಷಿತವಾಗಿರದ, ಆದರೆ ಕೈಗಾರಿಕಾ ವಿವಾದ ಅಧಿನಿಯಮ, 1947 (1947ರ 14)ರಲ್ಲಿ ಪರಿಭಾಷಿತವಾಗಿರುವ ಪದಗಳಿಗೆ ಮತ್ತು ಪದಾವಳಿಗಳಿಗೆ ಅನುಕ್ರಮವಾಗಿ, ಆ ಅಧಿನಿಯಮದಲ್ಲಿ ಕೊಟ್ಟಿರುವ ಅರ್ಥವೇ ಇರತಕ್ಕದ್ದು.

**3. ಅಧಿನಿಯಮದ ಅಧ್ಯಾರೋಹಿ ಪ್ರಭಾವ.–** ಈ ಅಧಿನಿಯಮದ ಉಪಬಂಧಗಳು, ಈ ಅಧಿನಿಯಮದ ಪ್ರಾರಂಭದ ಮೊದಲು ಅಥವಾ ತರುವಾಯ ಮಾಡಲಾದ ಇತರ ಯಾವುದೇ ಕಾನೂನು ಅಥವಾ ಯಾವುದೇ ಐತೀರ್ಪು, ಒಪ್ಪಂದ, ಅಥವಾ ಸೇವಾ ಕರಾರಿನ ನಿಬಂಧನೆಗಳಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಪರಿಣಾಮಕಾರಿಯಾದ ಯಾವುದೇ ಲಿಖಿತದಲ್ಲಿ ಅದಕ್ಕೆ ಅಸಂಗತವಾದುದು ಏನೇ ಇದ್ದರೂ ಪರಿಣಾಮಕಾರಿಯಾಗಿರತಕ್ಕದ್ದು.

## ಅಧ್ಯಾಯ II

## ಪುರುಷ ಮತ್ತು ಮಹಿಳಾ ಕೆಲಸಗಾರರಿಗೆ ಸಮಾನ ದರಗಳಲ್ಲಿ ಪರಿಶ್ರಮಧನದ ಸಂದಾಯ ಮತ್ತು ಇತರ ವಿಷಯಗಳು

**4. ಅದೇ ಕೆಲಸಕ್ಕೆ ಅಥವಾ ಅದೇ ರೀತಿಯ ಕೆಲಸಕ್ಕೆ ಪುರುಷ ಮತ್ತು ಮಹಿಳಾ ಕೆಲಸಗಾರರಿಗೆ ಸಮಾನ ಪರಿಶ್ರಮಧನವನ್ನು ಕೊಡುವುದು ನಿಯೋಜಕನ ಕರ್ತವ್ಯ.–** (1) ಯಾರೇ ನಿಯೋಜಕನು, ತನ್ನ ಕಾರ್ಯಸಂಸ್ಥೆಯಲ್ಲಿ ಅಥವಾ ನಿಯೋಜನೆಯಲ್ಲಿ ನೇಮಕವಾಗಿರುವ ಯಾರೇ ಕೆಲಸಗಾರನಿಗೆ ಅಂಥ ಕಾರ್ಯಸಂಸ್ಥೆಯಲ್ಲಿ ಅಥವಾ ನಿಯೋಜನೆಯಲ್ಲಿ ಅದೇ ಕೆಲಸ ಅಥವಾ ಅದೇ ರೀತಿಯ ಕೆಲಸವನ್ನು ಮಾಡುವುದಕ್ಕೆ ಬೇರೆ ಲಿಂಗದ ಕೆಲಸಗಾರರಿಗೆ, ತಾನು ಕೊಡುತ್ತಿರುವ ಪ್ರತಿಫಲಕ್ಕಿಂತ ಕಡಿಮೆ ದರಗಳಲ್ಲಿ ನಗದು ರೂಪದಲ್ಲಾಗಲಿ ಅಥವಾ ವಸ್ತು ರೂಪದಲ್ಲಾಗಲಿ ಪರಿಶ್ರಮಧನವನ್ನು ಕೊಡತಕ್ಕದ್ದಲ್ಲ;

(2) ಉಪಪ್ರಕರಣ (1)ರ ಉಪಬಂಧಗಳನ್ನು ಪಾಲಿಸುವ ಉದ್ದೇಶಕ್ಕಾಗಿ ಯಾವ ನಿಯೋಜಕನೂ ಯಾರೇ ಕೆಲಸಗಾರನ ಪರಿಶ್ರಮಧನದ ದರವನ್ನು ಕಡಿಮೆ ಮಾಡತಕ್ಕದ್ದಲ್ಲ.

(3) ಈ ಅಧಿನಿಯಮದ ಪ್ರಾರಂಭಕ್ಕೆ ಮೊದಲು ಯಾವುದೇ ಕಾರ್ಯಸಂಸ್ಥೆ ಅಥವಾ ಉದ್ಯೋಗದಲ್ಲಿ ಅದೇ ಕೆಲಸಕ್ಕೆ ಅಥವಾ ಅದೇ ರೀತಿಯ ಕೆಲಸಕ್ಕೆ ಪುರುಷ ಮತ್ತು ಮಹಿಳಾ ಕೆಲಸಗಾರರಿಗೆ ಸಂದಾಯವಾಗುತ್ತಿದ್ದ ಪರಿಶ್ರಮಧನದ ದರಗಳ ನಡುವಣ ವ್ಯತ್ಯಾಸವು, ಕೇವಲ ಲಿಂಗಭೇದದ ಆಧಾರದ ಮೇಲಿನದಾಗಿದ್ದರೆ ಅಂಥ ದರಗಳ ಪೈಕಿ, ಸಂದರ್ಭಾನುಸಾರ (ಕೇವಲ ಎರಡು ದರಗಳಿರುವ ಸಂರ್ಭಗಳಲ್ಲಿ), ಎರಡರಲ್ಲಿ ಹೆಚ್ಚಿನದನ್ನು ಅಥವಾ (ಎರಡಕ್ಕಿಂತ ಹೆಚ್ಚು ದರಗಳಿರುವ ಸಂದರ್ಭಗಳಲ್ಲಿ) ಎಲ್ಲಕ್ಕಿಂತ ಹೆಚ್ಚಿನದನ್ನು ಅಂಥ ಪ್ರಾರಂಭದಂದು ಮತ್ತು ಪ್ರಾರಂಭದಿಂದ ಅಂಥ ಪುರುಷ ಮತ್ತು ಮಹಿಳಾ ಕೆಲಸಗಾರರಿಗೆ ಪರಿಶ್ರಮಧನವಾಗಿ ಸಂದಾಯ ಮಾಡತಕ್ಕದ್ದು:

ಪರಂತು, ಈ ಉಪಪ್ರಕರಣದಲ್ಲಿರುವುದು ಯಾವುದೂ ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಯಾರೇ ಕೆಲಸಗಾರನು ಅಥವಾ ಕೆಲಸಗಾರಳು ಸಲ್ಲಿಸಿದ ಸೇವೆಯ ಸಂಬಂಧದಲ್ಲಿ, ಆತನಿಗೆ ಅಥವಾ ಆಕೆಗೆ ಸಂದಾಯವಾಗಬೇಕಾದ ಪ್ರತಿಫಲದ ದರದ ಪರಿಷ್ಕರಣಕ್ಕೆ ಅವನಿಗೆ ಅಥವಾ ಅವಳಿಗೆ ಹಕ್ಕನ್ನು ಕೊಡುವುದೆಂದು ಭಾವಿಸತಕ್ಕದ್ದಲ್ಲ.

**5. ಪುರುಷ ಮತ್ತು ಮಹಿಳಾ ಕೆಲಸಗಾರರನ್ನು ಭರ್ತಿ ಮಾಡಿಕೊಳ್ಳುವಾಗ ತಾರತಮ್ಯ ಮಾಡಕೂಡದು.–** ಈ ಅಧಿನಿಯಮದ ಪ್ರಾರಂಭದಂದು ಮತ್ತು ಪ್ರಾರಂಭದಿಂದ, ಅದೇ ಕೆಲಸಕ್ಕಾಗಿ ಅಥವಾ ಅದೇ ರೀತಿಯ ಕೆಲಸಕ್ಕಾಗಿ ಅಥವಾ ಸೇವಾ ಭರ್ತಿಯ ತರುವಾಯದ ಪದೋನ್ನತಿ, ತರಬೇತಿ ಅಥವಾ ವರ್ಗಾವಣೆಯಂಥ ಯಾವುದೇ ಸೇವಾ ಷರತ್ತಿನ ಮೇಲೆ ಕೆಲಸಗಾರರನ್ನು ಭರ್ತಿ ಮಾಡಿಕೊಳ್ಳುವಾಗ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಅಂಥ ಕೆಲಸಕ್ಕೆ ಮಹಿಳಾ ಕೆಲಸಗಾರರನ್ನು ನೇಮಿಸಿಕೊಳ್ಳುವುದನ್ನು ನಿಷೇಧಿಸಿದ್ದ ಹೊರತು ಅಥವಾ ನಿರ್ಬಂಧಿಸಿದ್ದ ಹೊರತು, ಮಹಿಳೆಯ ಬಗ್ಗೆ ನಿಯೋಜಕನು ಯಾವುದೇ ತಾರತಮ್ಯವನ್ನು ಮಾಡಕೂಡದು:

ಪರಂತು, ಈ ಪ್ರಕರಣದ ಉಪಬಂಧಗಳು, ಯಾವುದೇ ಕಾರ್ಯಸಂಸ್ಥೆಯಲ್ಲಿ ಅಥವಾ ನಿಯೋಜನೆಯಲ್ಲಿ ಹುದ್ದೆಗಳನ್ನು ಭರ್ತಿ ಮಾಡುವ ವಿಷಯದಲ್ಲಿ ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟುಗಳಿಗೆ, ಮಾಜಿ ಸೈನಿಕರು, ತೆಗೆದುಹಾಕಲಾದ ನೌಕರರು ಅಥವಾ ಇತರ ಯಾವುದೇ ವರ್ಗ ಅಥವಾ ಬಗೆಯ ವ್ಯಕ್ತಿಗಳಿಗೆ ಆದ್ಯತೆ ಕೊಡುವುದಕ್ಕೆ ಅಥವಾ ಕಾಯ್ದಿರಿಸುವುದಕ್ಕೆ ಯಾವ ಬಾಧಕವನ್ನು ಉಂಟುಮಾಡತಕ್ಕದ್ದಲ್ಲ.

**6. ಸಲಹಾ ಸಮಿತಿ.–** (1) ಮಹಿಳೆಯರಿಗೆ ಹೆಚ್ಚಿನ ಉದ್ಯೋಗಾವಕಾಶಗಳನ್ನು ಒದಗಿಸುವ ಉದ್ದೇಶಕ್ಕಾಗಿ, ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ

ಕಾರ್ಯಸಂಸ್ಥೆಗಳಲ್ಲಿ ಅಥವಾ ನಿಯೋಜನೆಗಳಲ್ಲಿ ಮಹಿಳೆಯರನ್ನು ಎಷ್ಟರಮಟ್ಟಿಗೆ ನಿಯೋಜಿಸಿಕೊಳ್ಳಬಹುದೆಂಬ ಬಗ್ಗೆ ತನಗೆ ಸಲಹೆ ಕೊಡಲು ಸಂಬಂಧಪಟ್ಟ ಸರ್ಕಾರವು ಒಂದು ಅಥವಾ ಹೆಚ್ಚು ಸಲಹಾ ಸಮಿತಿಗಳನ್ನು ರಚಿಸಬಹುದು.

(2) ಪ್ರತಿಯೊಂದು ಸಲಹಾ ಸಮಿತಿಯಲ್ಲಿ, ಸಮುಚಿತ ಸರ್ಕಾರದಿಂದ ನಾಮನಿರ್ದೇಶಿತರಾದ ಹತ್ತಕ್ಕಿಂತ ಕಡಿಮೆಯಿಲ್ಲದ ವ್ಯಕ್ತಿಗಳು ಇರತಕ್ಕದ್ದು; ಅದರಲ್ಲಿ ಅರ್ಧದಷ್ಟು ಮಹಿಳೆಯರು ಇರತಕ್ಕದ್ದು.

(3) ಸಲಹಾ ಸಮಿತಿಯು ತನ್ನ ಸಲಹೆಯನ್ನು ಕೊಡುವಲ್ಲಿ ಸಂಬಂಧಪಟ್ಟ ಕಾರ್ಯಸಂಸ್ಥೆ ಅಥವಾ ನಿಯೋಜನೆಯಲ್ಲಿ ನಿಯೋಜಿತರಾಗಿರುವ ಮಹಿಳೆಯರ ಸಂಖ್ಯೆ, ಕೆಲಸದ ಸ್ವರೂಪ, ಕೆಲಸದ ಅವಧಿ, ಸಂದರ್ಭಾನುಸಾರ, ಅಂಥ ನಿಯೋಜನೆಗೆ ಮಹಿಳೆಯರನ್ನು ನಿಯೋಜಿಸಿಕೊಳ್ಳುವುದರ ಸೂಕ್ತತೆ, ಅಲ್ಪಕಾಲಿಕ ಉದ್ಯೋಗವನ್ನು ಒಳಗೊಂಡಂತೆ ಮಹಿಳೆಯರಿಗೆ ಹೆಚ್ಚಿನ ಉದ್ಯೋಗಾವಕಾಶಗಳನ್ನೊದಗಿಸುವ ಅವಶ್ಯಕತೆ ಆಲೋಚಿಸಬಹುದಾದಂಥ ಇತರ ಸುಸಂಬದ್ಧ ಅಂಶಗಳಿಗೆ ಗಮನವನ್ನು ಕೊಡತಕ್ಕದ್ದು.

(4) ಸಲಹಾ ಸಮಿತಿಯು ತನ್ನ ಕಾರ್ಯವಿಧಾನವನ್ನು ತಾನೇ ವಿನಿಯಮಿಸಿಕೊಳ್ಳತಕ್ಕದ್ದು.

(5) ಸಮುಚಿತ ಸರ್ಕಾರವು, ಸಲಹಾ ಸಮಿತಿಯು ತನಗೆ ಕೊಟ್ಟ ಸಲಹೆಯನ್ನು ಪರಿಶೀಲಿಸಿದ ತರುವಾಯ ಮತ್ತು ಕಾರ್ಯಸಂಸ್ಥೆ ಅಥವಾ ನಿಯೋಜನೆಯಲ್ಲಿರುವ ಸಂಬಂಧಪಟ್ಟ ವ್ಯಕ್ತಿಗಳಿಗೆ ಮನವಿಗಳನ್ನು ಸಲ್ಲಿಸಲು ಅವಕಾಶವನ್ನು ಕೊಟ್ಟ ತರುವಾಯ, ಮಹಿಳಾ ಕೆಲಸಗಾರರ ನಿಯೋಜನೆಯ ಸಂಬಂಧದಲ್ಲಿ ಸಮುಚಿತ ಸರ್ಕಾರವು ಸೂಕ್ತವೆಂದು ಆಲೋಚಿಸಬಹುದಾದಂಥ ನಿರ್ದೇಶಗಳನ್ನು ಹೊರಡಿಸಬಹುದು.

7. **ಕ್ಲೇಮುಗಳನ್ನು ಮತ್ತು ಫಿರ್ಯಾದುಗಳನ್ನು ವಿಚಾರಣೆ ಮಾಡುವುದಕ್ಕಾಗಿ ಮತ್ತು ತೀರ್ಮಾನಿಸುವುದಕ್ಕಾಗಿ ಪ್ರಾಧಿಕಾರಗಳನ್ನು ನೇಮಿಸಲು ಸಮುಚಿತ ಸರ್ಕಾರದ ಅಧಿಕಾರ.–** (1) ಸಮುಚಿತ ಸರ್ಕಾರವು, ಕೆಳಕಂಡವುಗಳನ್ನು ವಿಚಾರಣೆ ಮಾಡಿ ತೀರ್ಮಾನಿಸುವ ಉದ್ದೇಶಕ್ಕಾಗಿ ಸೂಕ್ತ ಅಧಿಕಾರಿಗಳೆಂದು ತಾನು ಆಲೋಚಿಸುವಂಥ, ಕಾರ್ಮಿಕ ಅಧಿಕಾರಿಯ ದರ್ಜೆಗಿಂತ ಕಡಿಮೆಯಲ್ಲದ ಅಧಿಕಾರಿಗಳನ್ನು ಅಧಿಸೂಚನೆಯ ಮೂಲಕ ನೇಮಿಸಬಹುದು ಮತ್ತು ಅದೇ ಅಥವಾ ತರವಾಯದ ಅಧಿಸೂಚನೆಯ ಮೂಲಕ ಅಂಥ ಪ್ರತಿಯೊಬ್ಬ ಅಧಿಕಾರಿಯು ತನ್ನ ಅಧಿಕಾರವ್ಯಾಪ್ತಿಯನ್ನು ಚಲಾಯಿಸಬೇಕಾದ ಸ್ಥಳೀಯ ಪರಿಮಿತಿಗಳನ್ನು ನಿರ್ದಿಷ್ಟಪಡಿಸಬಹುದು,–

(ಎ) ಈ ಅಧಿನಿಯಮದ ಯಾವುದೇ ಉಪಬಂಧದ ಉಲ್ಲಂಘನೆಗೆ ಸಂಬಂಧಪಟ್ಟ ಫಿರ್ಯಾದುಗಳು;

(ಬಿ) ಅದೇ ಕೆಲಸಕ್ಕೆ ಅಥವಾ ಅಂಥದೇ ರೀತಿಯ ಕೆಲಸಕ್ಕೆ ಪುರುಷ ಮತ್ತು ಮಹಿಳಾ ಕೆಲಸಗಾರರಿಗೆ ಸಮಾನ ದರಗಳಲ್ಲಿ ಮಂಜೂರಿಯನ್ನು ಸಂದಾಯ ಮಾಡದಿರುವುದರಿಂದ ಉದ್ಭವಿಸಿರುವ ಕ್ಲೇಮುಗಳು;

(2) ಉಪಪ್ರಕರಣ (1)ರಲ್ಲಿ ಉಲ್ಲೇಖಿಸಲಾದ ಪ್ರತಿಯೊಂದು ಫಿರ್ಯಾದು ಅಥವಾ ಕ್ಲೇಮನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಸಲ್ಲಿಸತಕ್ಕದ್ದು.

(3) ಎರಡು ಅಥವಾ ಹೆಚ್ಚು ಕೆಲಸಗಳು ಒಂದೇ ರೀತಿಯವೇ ಅಥವಾ ಅಂಥದೇ ರೀತಿಯವೇ ಎಂಬ ಬಗ್ಗೆ ಯಾವುದೇ ಪ್ರಶ್ನೆಯು ಉದ್ಭವಿಸಿದಲ್ಲಿ, ಅದನ್ನು (1)ನೇ ಉಪಪ್ರಕರಣದ ಮೇರೆಗೆ ನೇಮಿತನಾದ ಪ್ರಾಧಿಕಾರಿಯು ನಿರ್ಧರಿಸತಕ್ಕದ್ದು.

(4) ಉಪಪ್ರಕರಣ (1)ರ ಮೇರೆಗೆ ನಿಯೋಜಿತನಾದ ಅಧಿಕಾರಿಗೆ ಫಿರ್ಯಾದು ಅಥವಾ ಕ್ಲೇಮನ್ನು ಸಲ್ಲಿಸಿದಾಗ, ಅರ್ಜಿದಾರನಿಗೆ ಮತ್ತು ನಿಯೋಜಕನಿಗೆ ಅಹವಾಲು ಹೇಳಿಕೊಳ್ಳುವ ಅವಕಾಶವನ್ನು ನೀಡಿದ ತರುವಾಯ,ಮತ್ತು ತಾನು ಅವಶ್ಯವೆಂದು ಪರ್ಯಾಲೋಚಿಸಬಹುದಾದ ವಿಚಾರಣೆಯನ್ನು ಮಾಡಿದ ತರುವಾಯ, ಆ ಪ್ರಾಧಿಕಾರಿಯು,–

(i) ಅದೇ ಕೆಲಸಕ್ಕೆ ಅಥವಾ ಅಂಥದೇ ರೀತಿಯ ಕೆಲಸಕ್ಕೆ ಪುರುಷ ಮತ್ತು ಮಹಿಳಾ ಕೆಲಸಗಾರರಿಗೆ ಸಮಾನ ದರಗಳಲ್ಲಿ ಮಜೂರಿ ಸಂದಾಯ ಮಾಡದಿರುವುದರಿಂದ ಉದ್ಭವಿಸಿರುವ ಕ್ಲೇಮಿನ ಸಂದರ್ಭದಲ್ಲಿ, ಕೆಲಸಗಾರನಿಗೆ ಸಂದಾಯವಾಗಬೇಕಾಗಿದ್ದ ಮತ್ತು ಈಗಾಗಲೇ ಸಂದಾಯವಾಗಿರುವ ಮೊಬಲಗಿನ ನಡುವಣ ವ್ಯತ್ಯಾಸದ ಹಣವನ್ನು ಸಂದಾಯ ಮಾಡತಕ್ಕದ್ದೆಂದು ನಿರ್ದೇಶಿಸಬಹುದು;

(ii) ಫಿರ್ಯಾದಿನ ಸಂದರ್ಭದಲ್ಲಿ, ಈ ಅಧಿನಿಯಮದ ಯಾವುದೇ ಉಪಬಂಧದ ಉಲ್ಲಂಘನೆಯಾಗದಂತೆ ನೋಡಿಕೊಳ್ಳಲು ನಿಯೋಜಕನು ಸಮರ್ಪಕ ಕ್ರಮಗಳನ್ನು ಕೈಗೊಳ್ಳತಕ್ಕದ್ದೆಂದು ನಿರ್ದೇಶಿಸಬಹುದು.

(5) ಉಪಪ್ರಕರಣ (1)ರ ಮೇರೆಗೆ ನೇಮಿತನಾದ ಪ್ರತಿಯೊಬ್ಬ ಪ್ರಾಧಿಕಾರಿಯು ಸಾಕ್ಷ್ಯವನ್ನು ತೆಗೆದುಕೊಳ್ಳುವ ಮತ್ತು ಸಾಕ್ಷಿಗಳ ಮತ್ತು ದಸ್ತಾವೇಜುಗಳ ಹಾಜರಾತಿಗಾಗಿ ಒತ್ತಾಯಪಡಿಸುವ ಉದ್ದೇಶಕ್ಕಾಗಿ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಮೇರೆಗೆ ಸಿವಿಲ್ ನ್ಯಾಯಾಲಯಕ್ಕೆ ಇರುವ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಅಂಥ ಪ್ರತಿಯೊಬ್ಬ ಪ್ರಾಧಿಕಾರಿಯನ್ನು ದಂಡ ಪ್ರಕ್ರಿಯಾ

ಸಂಹಿತೆ, 1973 (1974ರ 2)ರ 195ನೇ ಪ್ರಕರಣದ ಮತ್ತು XXVIನೇ ಅಧ್ಯಾಯದ ಉದ್ದೇಶಗಳಿಗಾಗಿ ಸಿವಿಲ್ ನ್ಯಾಯಾಲಯವೆಂದು ಭಾವಿಸತಕ್ಕದ್ದು.

(6) ಉಪಪ್ರಕರಣ (1)ರ ಮೇರೆಗೆ ನೇಮಿತನಾದ ಪ್ರಾಧಿಕಾರಿಯು ಯಾವುದೇ ಫಿರ್ಯಾದು ಅಥವಾ ಕ್ಲೇಮಿನ ಮೇಲೆ ಮಾಡಿದ ಆದೇಶದಿಂದ ಬಾಧಿತನಾದ ಯಾರೇ ನಿಯೋಜಕ ಅಥವಾ ಕೆಲಸಗಾರನು, ಆದೇಶದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ, ಸಮುಚಿತ ಸರ್ಕಾರವು ಅಧಿಸೂಚನೆಯ ಮೂಲಕ ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ಪ್ರಾಧಿಕಾರಿಗೆ ಅಪೀಲು ಹಾಕಿಕೊಳ್ಳಬಹುದು ಮತ್ತು ಆ ಪ್ರಾಧಿಕಾರಿಯು ಅಪೀಲು ಯಾವ ಆದೇಶದ ವಿರುದ್ಧ ಅಪೀಲು ಹಾಕಿಕೊಳ್ಳಲಾಗಿದೆಯೋ ಅದನ್ನು ಸ್ಥಿರೀಕರಿಸಬಹುದು, ಮಾರ್ಪಾಡುಗೊಳಿಸಬಹುದು ಅಥವಾ ವಿಪರ್ಯಗೊಳಿಸಬಹುದು ಮತ್ತು ಅಂಥ ಪ್ರಾಧಿಕಾರಿಯು ಮಾಡಿದ ಆದೇಶದ ವಿರುದ್ಧ ಮತ್ತೆ ಯಾವುದೇ ಅಪೀಲಿಗೆ ಅವಕಾಶವಿರತಕ್ಕದ್ದಲ್ಲ.

(7) ಉಪಪ್ರಕರಣ (6)ರಲ್ಲಿ ಉಲ್ಲೇಖಿಸಲಾದ ಪ್ರಾಧಿಕಾರವು, (6)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಅವಧಿಯೊಳಗಾಗಿ ಸಾಕಷ್ಟು ಕಾರಣಗಳಿಂದಾಗಿ ಅಪೀಲದಾರನಿಗೆ ಅಪೀಲು ಹಾಕಿಕೊಳ್ಳಲು ಅಡ್ಡಿಯುಂಟಾಯಿತೆಂದು ಅದಕ್ಕೆ ಮನದಟ್ಟಾದರೆ, ಮತ್ತೆ ಮೂವತ್ತು ದಿನಗಳ ಅವಧಿಯೊಳಗೆ ಅಪೀಲು ಹಾಕಿಕೊಳ್ಳಲು ಅವಕಾಶ ಕೊಡಬಹುದು, ಆದರೆ ಅನಂತರ ಅವಕಾಶವಿರತಕ್ಕದ್ದಲ್ಲ.

(8) ಈ ಪ್ರಕರಣದ ಮೇರೆಗೆ ನೇಮಿತನಾದ ಪ್ರಾಧಿಕಾರಿಯ ತೀರ್ಮಾನದಿಂದಾಗಿ ನಿಯೋಜಕನು ಕೊಡಬೇಕಾಗಿರುವ ಹಣದ ವಸೂಲಿಗೆ ಕೈಗಾರಿಕಾ ವಿವಾದಗಳ ಅಧಿನಿಯಮ, 1947 (1947ರ 14)ರ 33ಸಿ ಪ್ರಕರಣದ (1)ನೇ ಉಪಪ್ರಕರಣದ ಉಪಬಂಧಗಳು ಅನ್ವಯಿಸತಕ್ಕದ್ದು.

## ಅಧ್ಯಾಯ III

### ಸಂಕೀರ್ಣ

**8. ನಿಯೋಜಕರು ರಿಜಿಸ್ಟರುಗಳನ್ನು ಇಡಬೇಕಾದ ಕರ್ತವ್ಯ.–** ಈ ಅಧಿನಿಯಮದ ಪ್ರಾರಂಭದಂದು ಮತ್ತು ಅಂದಿನಿಂದ ಪ್ರತಿಯೊಬ್ಬ ನಿಯೋಜಕನು ತಾನು ನಿಯೋಜಿಸಿದ ಕೆಲಸಗಾರರ ಸಂಬಂಧದಲ್ಲಿ ನಿಯಮಿಸಬಹುದಾದಂಥ ರಿಜಿಸ್ಟರುಗಳನ್ನು ಮತ್ತು ಇತರ ದಸ್ತಾವೇಜುಗಳನ್ನು ಇಡತಕ್ಕದ್ದು.

**9. ಪರಿಶೀಲಕರು.–** (1) ಈ ಅಧಿನಿಯಮದ ಉಪಬಂಧಗಳನ್ನು ಅಥವಾ ಅದರ ಮೇರೆಗೆ ರಚಿಸಲಾದ ನಿಯಮಗಳನ್ನು ನಿಯೋಜಕರು ಪಾಲಿಸುತ್ತಿದ್ದಾರೆಯೇ ಎಂಬ ಬಗ್ಗೆ ವಿಚಾರಣೆ ನಡೆಸುವ ಉದ್ದೇಶಕ್ಕಾಗಿ, ಸಮುಚಿತ ಸರ್ಕಾರವು ತಾನು ಸೂಕ್ತವೆಂದು ಭಾವಿಸಬಹುದಾದ ವ್ಯಕ್ತಿಗಳನ್ನು

ಪರಿಶೀಲಕರನ್ನಾಗಿ, ಅಧಿಸೂಚನೆಯ ಮೂಲಕ ನೇಮಿಸಬಹುದು ಮತ್ತು ಆ ಪರಿಶೀಲಕರು ಅಂಥ ವಿಚಾರಣೆಯನ್ನು ನಡೆಸಬಹುದಾದ ಸ್ಥಳೀಯ ಪರಿಮಿತಿಗಳನ್ನು ಅದು ನಿರ್ಧರಿಸಬಹುದು.

(2) ಪ್ರತಿಯೊಬ್ಬ ಪರಿಶೀಲಕನನ್ನು ಭಾರತ ದಂಡ ಸಂಹಿತೆ (1860ರ 45)ಯ 21ನೇ ಪ್ರಕರಣದ ಅರ್ಥವ್ಯಾಪ್ತಿಯಲ್ಲಿ ಲೋಕ ನೌಕರನೆಂದು ಭಾವಿಸತಕ್ಕದ್ದು.

(3) ಅಂಥ ಪರಿಶೀಲಕನು ತನ್ನ ಅಧಿಕಾರವ್ಯಾಪ್ತಿಯ ಸ್ಥಳೀಯ ಪರಿಮಿತಿಗಳಲ್ಲಿರುವ ಯಾವುದೇ ಸ್ಥಳದಲ್ಲಿ,-

(ಎ) ಯಾವುದೇ ಯುಕ್ತ ಕಾಲದಲ್ಲಿ ತಾನು ಸೂಕ್ತವೆಂದು ಆಲೋಚಿಸುವಂಥ ನೆರವಿನೊಂದಿಗೆ, ಯಾವುದೇ ಕಟ್ಟಡ, ಕಾರ್ಖಾನೆ, ಆವರಣ ಅಥವಾ ನೌಕೆಯನ್ನು ಪ್ರವೇಶಿಸಬಹುದು;

(ಬಿ) ಕೆಲಸಗಾರರ ನಿಯೋಜನೆಗೆ ಸಂಬಂಧಿಸಿದ ಯಾವುದೇ ರಿಜಿಸ್ಟರು, ಹಾಜರಿ ಪುಸ್ತಕ ಅಥವಾ ಇತರ ದಸ್ತಾವೇಜುಗಳನ್ನು ಹಾಜರುಪಡಿಸಲು ಯಾರೇ ನಿಯೋಜಕನನ್ನು ಅಗತ್ಯಪಡಿಸಬಹುದು ಮತ್ತು ಅಂಥ ದಸ್ತಾವೇಜುಗಳನ್ನು ಪರೀಕ್ಷಿಸಬಹುದು;

(ಸಿ) ಈ ಅಧಿನಿಯಮದ ಉಪಬಂಧಗಳನ್ನು ಪಾಲಿಸಲಾಗುತ್ತಿದೆಯೇ ಅಥವಾ ಪಾಲಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವ ಉದ್ದೇಶಕ್ಕಾಗಿ ಆ ಸ್ಥಳದಲ್ಲೇ ಅಥವಾ ಬೇರೆ ಕಡೆಗೆ ಯಾರೇ ವ್ಯಕ್ತಿಯ ಸಾಕ್ಷ್ಯವನ್ನು ತೆಗೆದುಕೊಳ್ಳಬಹುದು;

(ಡಿ) ನಿಯೋಜಕನನ್ನು, ಅವನ ಏಜೆಂಟನನ್ನು ಅಥವಾ ನೌಕರನನ್ನು ಅಥವಾ ಕಾರ್ಯಸಂಸ್ಥೆಯ ಅಥವಾ ಅದಕ್ಕೆ ಸಂಬಂಧಿಸಿದ ಯಾವುದೇ ಆವರಣದ ಆಡಳಿತವನ್ನು ಹೊಂದಿರುವನೆಂದು ಕಂಡುಬರುವ ಇತರ ಯಾರೇ ವ್ಯಕ್ತಿಯನ್ನು ಅಥವಾ ಆ ಕಾರ್ಯಸಂಸ್ಥೆಯಲ್ಲಿ ಕೆಲಸಗಾರನಾಗಿರುವನೆಂದು ಅಥವಾ ಆಗಿದ್ದನೆಂದು ಪರಿಶೀಲಕನು ನಂಬಲು ಯುಕ್ತ ಕಾರಣವಿರುವ ವ್ಯಕ್ತಿಯನ್ನು ಪರೀಕ್ಷಿಸಬಹುದು;

(ಇ) ಈ ಅಧಿನಿಯಮದ ಮೇರೆಗೆ ಇಡಲಾದ ಯಾವುದೇ ರಿಜಿಸ್ಟರಿನ ಅಥವಾ ಇತರ ದಸ್ತಾವೇಜಿನ ಪ್ರತಿಗಳನ್ನು ಮಾಡಿಕೊಳ್ಳಬಹುದು ಅಥವಾ ಅದರ ಉದ್ಧೃತ ಭಾಗಗಳನ್ನು ತೆಗೆದುಕೊಳ್ಳಬಹುದು.

(4) ಯಾವುದೇ ರಿಜಿಸ್ಟರು ಅಥವಾ ಇತರ ದಸ್ತಾವೇಜನ್ನು ಹಾಜರುಪಡಿಸಲು ಅಥವಾ ಯಾವುದೇ ಮಾಹಿತಿಯನ್ನು ಒದಗಿಸಲು ಪರಿಶೀಲಕನು ಅಗತ್ಯಪಡಿಸಿದ ಯಾರೇ ವ್ಯಕ್ತಿಯು ಅಂಥ ಕೋರಿಕೆಯನ್ನು ಪಾಲಿಸತಕ್ಕದ್ದು.

**10. ದಂಡಗಳು.–** (1) ಈ ಅಧಿನಿಯಮದ ಪ್ರಾರಂಭದ ತರುವಾಯ, ಯಾರೇ ನಿಯೋಜಕನು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ,–

(ಎ) ತಾನು ನಿಯೋಜಿಸಿರುವ ಕೆಲಸಗಾರರ ಸಂಬಂಧದಲ್ಲಿ ಯಾವುದೇ ರಿಜಿಸ್ಟರು ಅಥವಾ ಇತರ ದಸ್ತಾವೇಜನ್ನು ಇಡಲು ಅವನನ್ನು ಅಗತ್ಯಪಡಿಸಲಾಗಿದ್ದು ಅವನು ಹಾಗೆ ಮಾಡದಿದ್ದರೆ ಅಥವಾ ಮಾಡಲು ತಪ್ಪಿದರೆ: ಅಥವಾ

(ಬಿ) ಕೆಲಸಗಾರರ ನಿಯೋಜನೆಗೆ ಸಂಬಂಧಿಸಿದ ಯಾವುದೇ ರಿಜಿಸ್ಟರು, ಹಾಜರಿ ಪುಸ್ತಕ ಅಥವಾ ಇತರ ದಸ್ತಾವೇಜನ್ನು ಹಾಜರುಪಡಿಸಲು ಅವನನ್ನು ಅಗತ್ಯಪಡಿಸಲಾಗಿದ್ದು ಅವನು ಹಾಗೆ ಮಾಡದಿದ್ದರೆ ಅಥವಾ ಹಾಗೆ ಮಾಡಲು ತಪ್ಪಿದರೆ; ಅಥವಾ

(ಸಿ) ಯಾವುದೇ ಸಾಕ್ಷ್ಯವನ್ನು ಕೊಡಲು ಅವನನ್ನು ಅಗತ್ಯಪಡಿಸಲಾಗಿದ್ದು, ಅವನು ಹಾಗೆ ಕೊಡದಿದ್ದರೆ ಅಥವಾ ಕೊಡಲು ನಿರಾಕರಿಸಿದರೆ ಅಥವಾ ತನ್ನ ಏಜೆಂಟನನ್ನು, ನೌಕರನನ್ನು ಅಥವಾ ಕಾರ್ಯಸಂಸ್ಥೆಯ ಆಡಳಿತವನ್ನು ಹೊಂದಿರುವ ಇತರ ಯಾರೇ ವ್ಯಕ್ತಿಯನ್ನು ಅಥವಾ ಯಾರೇ ಕೆಲಸಗಾರನನ್ನು ಸಾಕ್ಷ್ಯ ಕೊಡದಂತೆ ಪ್ರತಿಬಂಧಿಸಿದ್ದರೆ; ಅಥವಾ

(ಡಿ) ಯಾವುದೇ ಮಾಹಿತಿಯನ್ನು ಕೊಡಲು ಅವನನ್ನು ಅಗತ್ಯಪಡಿಸಲಾಗಿದ್ದು, ಅವನು ಹಾಗೆ ಕೊಡದಿದ್ದರೆ, ಅಥವಾ ಕೊಡಲು ನಿರಾಕರಿಸಿದ್ದರೆ

– ಅವನು ಒಂದು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಸಾದಾ ಕಾರಾವಾಸದಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

(2) ಈ ಅಧಿನಿಯಮದ ಪ್ರಾರಂಭದ ತರುವಾಯ, ಯಾರೇ ನಿಯೋಜಕನು,–

(ಎ) ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿ ಯಾವುದೇ ನೌಕರಿ ಭರ್ತಿಯನ್ನು ಮಾಡಿಕೊಂಡರೆ; ಅಥವಾ

(ಬಿ) ಅದೇ ಕೆಲಸಕ್ಕೆ ಅಥವಾ ಅದೇ ರೀತಿಯ ಕೆಲಸಕ್ಕೆ, ಪುರುಷ ಮತ್ತು ಮಹಿಳಾ ಕೆಲಸಗಾರರಿಗೆ ಅಸಮದರಗಳಲ್ಲಿ ಯಾವುದೇ ಪರಿಶ್ರಮ ಧನವನ್ನು ಸಂದಾಯ ಮಾಡಿದರೆ; ಅಥವಾ

(ಸಿ) ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿ ಪುರುಷ ಮತ್ತು ಮಹಿಳಾ ಕೆಲಸಗಾರರ ನಡುವೆ ತಾರತಮ್ಯ ಮಾಡಿದರೆ; ಅಥವಾ

(ಡಿ) ಸಮುಚಿತ ಸರ್ಕಾರವು, 6ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ಕೊಟ್ಟ ಯಾವುದೇ ನಿರ್ದೇಶನವನ್ನು ಪಾಲಿಸದಿದ್ದರೆ ಅಥವಾ ಪಾಲಿಸಲು ತಪ್ಪಿದರೆ

– ಅವನು ಹತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆ ಇಲ್ಲದ ಆದರೆ, ಇಪ್ಪತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜಲ್ಮಾನೆಯಿಂದ ಅಥವಾ ಮೂರು ತಿಂಗಳಿಗಿಂತ ಕಡಿಮೆ ಇಲ್ಲದ ಆದರೆ, ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಮೊದಲ ಅಪರಾಧಕ್ಕಾಗಿ ಅವೆರಡರಿಂದಲೂ ಮತ್ತು ಎರಡನೆಯ ಹಾಗೂ ತರುವಾಯದ ಅಪರಾಧಗಳಿಗಾಗಿ ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದಲೂ ದಂಡನೀಯನಾಗತಕ್ಕದ್ದು.

(3) ಯಾರೇ ಪರಿಶೀಲಕನ ಮುಂದೆ ಯಾವುದೇ ರಿಜಿಸ್ಟರನ್ನು ಅಥವಾ ಇತರ ದಸ್ತಾವೇಜನ್ನು ಹಾಜರುಪಡಿಸಲು ಮತ್ತು ಯಾವುದೇ ಮಾಹಿತಿಯನ್ನು ಕೊಡಲು ಯಾರೇ ವ್ಯಕ್ತಿಯನ್ನು ಅಗತ್ಯಪಡಿಸಲಾಗಿದ್ದು, ಅವರು ಹಾಗೆ ಮಾಡದಿದ್ದರೆ ಅಥವಾ ಮಾಡಲು ನಿರಾಕರಿಸಿದರೆ, ಅವನು ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

**11. ಕಂಪನಿಗಳ ಅಪರಾಧಗಳು.–** (1) ಯಾವುದೇ ಕಂಪನಿಯು ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಮಾಡಿರುವಲ್ಲಿ ಅಪರಾಧವು ನಡೆದ ಕಾಲದಲ್ಲಿ ಕಂಪನಿಯ ಆಡಳಿತವನ್ನು ಹೊಂದಿದ್ದ ಮತ್ತು ಆ ಕಂಪನಿಯ ವ್ಯವಹಾರವನ್ನು ನಡೆಸುವ ಬಗ್ಗೆ ಕಂಪನಿಗೆ ಹೊಣೆಗಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಕಂಪನಿಯನ್ನು ಆ ಅಪರಾಧದ ಬಗ್ಗೆ ತಪ್ಪಿತಸ್ಥರೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು:

ಪರಂತು, ಆ ಅಪರಾಧವು ತನ್ನ ತಿಳಿವಳಿಕೆಗೆ ಬಾರದ ನಡೆಯಿತೆಂದು ಅಥವಾ ಅಂಥ ಅಪರಾಧವು ನಡೆಯುವುದನ್ನು ತಡೆಗಟ್ಟಲು ತಾನು ಯಥೋಚಿತವಾದ ಎಲ್ಲ ಎಚ್ಚರಿಕೆಯನ್ನು ವಹಿಸಿದ್ದೆನೆಂದು ಯಾರೇ ವ್ಯಕ್ತಿಯು ರುಜುವಾತುಪಡಿಸಿದರೆ, ಅವನನ್ನು ಈ ಉಪಪ್ರಕರಣದಲ್ಲಿರುವುದು ಯಾವುದೂ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾರೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಇಲ್ಲವೇ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ಅವರ ಯಾವುದೇ ನಿರ್ಲಕ್ಷತೆಯ ಕಾರಣದಿಂದ ನಡೆಯಿತೆಂದು ಆರೋಪಿಸಬಹುದಾಗಿದೆಯೆಂದು ರುಜುವಾತಾದರೆ, ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಆ ಅಪರಾಧದ ಬಗ್ಗೆ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅವನು ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) "ಕಂಪನಿ" ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಇದು ಫರ್ಮು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿಗೆ ಸಂಬಂಧಿಸಿದಂತೆ "ನಿರ್ದೇಶಕ" ಎಂದರೆ ಫರ್ಮಿನ ಒಬ್ಬ ಪಾಲುದಾರ.

**12. ಅಪರಾಧಗಳ ಸಂಜ್ಞೇಯತೆ ಮತ್ತು ಅಧಿವಿಚಾರಣೆ.–** (1) ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು ಮಹಾನಗರ ಮ್ಯಾಜಿಸ್ಟ್ರೇಟನ ಅಥವಾ ಮೊದಲನೇ ವರ್ಗದ ನ್ಯಾಯಿಕ ಮ್ಯಾಜಿಸ್ಟ್ರೇಟನ ನ್ಯಾಯಾಲಯಕ್ಕಿಂತ ಕಡಿಮೆ ದರ್ಜೆಯ ಯಾವುದೇ ನ್ಯಾಯಾಲಯವು ಅಧಿವಿಚಾರಣೆ ಮಾಡತಕ್ಕದ್ದಲ್ಲ.

(2) ಯಾವುದೇ ನ್ಯಾಯಾಲಯವು, ಈ ಅಧಿನಿಯಮದ ಮೇರೆಗೆ ದಂಡನೀಯವಾದ ಅಪರಾಧದ ಬಗ್ಗೆ,–

(ಎ) ತನ್ನದೇ ತಿಳಿವಳಿಕೆಯ ಮೇರೆಗೆ ಅಥವಾ ಸಮುಚಿತ ಸರ್ಕಾರವು ಅಥವಾ ಈ ಬಗ್ಗೆ ಅದು ಅಧಿಕೃತಗೊಳಿಸಿದ ಅಧಿಕಾರಿಯು ಮಾಡಿದ ಫಿರ್ಯಾದಿನ ಮೇಲೆ; ಅಥವಾ

(ಬಿ) ಅಪರಾಧದಿಂದ ಬಾಧಿತನಾದ ವ್ಯಕ್ತಿಯು ಅಥವಾ ಮನ್ನಣೆ ಪಡೆದ ಯಾವುದೇ ಕ್ಷೇಮಾಭಿವೃದ್ಧಿ ಸಂಸ್ಥೆ ಅಥವಾ ಸಂಘಟನೆಯು ಮಾಡಿದ ಫಿರ್ಯಾದಿನ ಮೇಲೆ

–ಅಲ್ಲದೆ ಸಂಜ್ಞೇಯತೆಯನ್ನು ಕೈಗೊಳ್ಳತಕ್ಕದ್ದಲ್ಲ.

**ವಿವರಣೆ.–** ಈ ಉಪಪ್ರಕರಣದ ಉದ್ದೇಶಗಳಿಗಾಗಿ "ಮನ್ನಣೆ ಪಡೆದ ಸಂಸ್ಥೆ ಅಥವಾ ಸಂಘಟನೆ" ಎಂದರೆ, ಈ ಸಂಬಂಧದಲ್ಲಿ ಕೇಂದ್ರ ಅಥವಾ ರಾಜ್ಯ ಸರ್ಕಾರವು ಮನ್ನಣೆ ಮಾಡಿದ ಸಮಾಜ ಕಲ್ಯಾಣ ಸಂಸ್ಥೆ ಅಥವಾ ಸಂಘಟನೆ.

**13. ನಿಯಮ ರಚನಾಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವುಂಟಾಗದಂತೆ ಅಂಥ ನಿಯಮಗಳು ಕೆಳಕಂಡ ಎಲ್ಲ ಅಥವಾ ಯಾವುದೇ ವಿಷಯಗಳ ಬಗ್ಗೆ ಉಪಬಂಧಿಸಬಹುದು, ಎಂದರೆ:–

(ಎ) 7ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಫಿರ್ಯಾದನ್ನು ಅಥವಾ ಕ್ಲೇಮನ್ನು ಸಲ್ಲಿಸಬೇಕಾದ ವಿಧಾನ;

(ಬಿ) ನಿಯೋಜಕನು ತಾನು ನಿಯೋಜಿಸಿಕೊಂಡಿರುವ ಕೆಲಸಗಾರರ ಸಂಬಂಧದಲ್ಲಿ, 8ನೇ ಪ್ರಕರಣದ ಮೇರೆಗೆ ಇಡಬೇಕಾಗಿರುವ ರಿಜಿಸ್ಟರುಗಳು ಮತ್ತು ಇತರ ದಸ್ತಾವೇಜುಗಳು;

(ಸಿ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಇತರ ಯಾವುದೇ ವಿಷಯ.

(3) ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದೇ ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದು ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದು ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಸಂದರ್ಭಾನುಸಾರ ಆ ನಿಯಮವು ಆ ತರುವಾಯ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದರೆ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾನೂನು ಮಾನ್ಯತೆಗೆ ಬಾಧಕವುಂಟುಮಾಡತಕ್ಕದ್ದಲ್ಲ.

**14. ನಿರ್ದೇಶನಗಳನ್ನು ಕೊಡಲು ಕೇಂದ್ರ ಸರ್ಕಾರದ ಅಧಿಕಾರ.–** ರಾಜ್ಯದಲ್ಲಿ ಈ ಅಧಿನಿಯಮವನ್ನು ಜಾರಿಗೊಳಿಸುವ ಬಗ್ಗೆ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ನಿರ್ದೇಶನಗಳನ್ನು ಕೊಡಬಹುದು.

**15. ಕೆಲವು ವಿಶೇಷ ಸಂದರ್ಭಗಳಲ್ಲಿ ಅಧಿನಿಯಮ ಅನ್ವಯವಾಗದಿರುವುದು.–** ಈ ಅಧಿನಿಯಮದಲ್ಲಿ ಇರುವುದು ಯಾವುದೂ,–

(ಎ) ಮಹಿಳೆಯರಿಗೆ ವಿಶೇಷ ಗಮನ ನೀಡುವ ಯಾವುದೇ ಕಾನೂನಿನ ಅಗತ್ಯತೆಗಳನ್ನು ಪಾಲಿಸುವಲ್ಲಿ ಮಹಿಳೆಯರ ನಿಯೋಜನೆ ನಿಬಂಧನೆಗಳು ಮತ್ತು ಷರತ್ತುಗಳಿಗೆ ಬಾಧಿತವಾಗುವ ಸಂದರ್ಭಗಳಿಗೆ; ಅಥವಾ

(ಬಿ) (i) ಮಗುವಿನ ಜನನ ಅಥವಾ ನಿರೀಕ್ಷಿತ ಜನನಕ್ಕೆ; ಅಥವಾ

(ii) ನಿವೃತ್ತಿ, ವಿವಾಹ ಅಥವಾ ಮರಣಕ್ಕೆ ಸಂಬಂಧಪಟ್ಟ ನಿಬಂಧನೆಗಳು ಮತ್ತು ಷರತ್ತುಗಳಿಗೆ ಅಥವಾ ನಿವೃತ್ತಿ, ವಿವಾಹ ಅಥವಾ ಮರಣಕ್ಕೆ ಸಂಬಂಧಪಟ್ಟಂತೆ ಮಾಡಿದ ಯಾವುದೇ ಉಪಬಂಧಕ್ಕೆ ಸಂಬಂಧಿಸಿದಂತೆ

– ಮಹಿಳೆಯರಿಗೆ ನೀಡಿದ ಯಾವುದೇ ವಿಶೇಷ ಗಮನಕ್ಕೆ ಅನ್ವಯವಾಗತಕ್ಕದ್ದಲ್ಲ.

**16. ಘೋಷಣೆಯನ್ನು ಮಾಡುವ ಅಧಿಕಾರ.–** ಯಾವುದೇ ವಿಷಯದ ಎಲ್ಲಾ ಸನ್ನಿವೇಶಗಳನ್ನು ಪರ್ಯಾಲೋಚಿಸಿದ ತರುವಾಯ ಯಾವುದೇ ಕಾರ್ಯಸಂಸ್ಥೆ ಅಥವಾ ನಿಯೋಜನೆಯಲ್ಲಿ ಪುರುಷ ಮತ್ತು ಮಹಿಳಾ ಕೆಲಸಗಾರರ ಪರಿಶ್ರಮಧನ ಅಥವಾ ಪರಿಶ್ರಮ ಧನದ ನಿರ್ದಿಷ್ಟ ಪ್ರಕಾರಕ್ಕೆ ಸಂಬಂಧಿಸಿದ ವ್ಯತ್ಯಾಸವು ಲಿಂಗಭೇದ ಆಧಾರದ ಮೇಲಲ್ಲದೆ ಇತರ ಅಂಶದ ಮೇಲೆ ಆಧಾರಿತವಾಗಿದೆಯೆಂದು ಸಮುಚಿತ ಸರ್ಕಾರಕ್ಕೆ ಮನದಟ್ಟಾದರೆ, ಅದು ಅಧಿಸೂಚನೆಯ ಮೂಲಕ ಆ ಬಗ್ಗೆ ಘೋಷಣೆಯನ್ನು ಮಾಡಬಹುದು ಮತ್ತು ಅಂಥ ವ್ಯತ್ಯಾಸಕ್ಕೆ ಕಾರಣವೆಂದು ಹೇಳಬಹುದಾದ ನಿಯೋಜಕನ ಯಾವುದೇ ಕಾರ್ಯವನ್ನು ಈ ಅಧಿನಿಯಮದ ಯಾವುದೇ ಉಪಬಂಧದ ಉಲ್ಲಂಘನೆಯೆಂದು ಭಾವಿಸತಕ್ಕದ್ದಲ್ಲ.

**17. ತೊಂದರೆಗಳನ್ನು ನಿವಾರಿಸುವ ಅಧಿಕಾರ.–** ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ, ತೊಂದರೆಯನ್ನು ನಿವಾರಿಸುವ ಉದ್ದೇಶಕ್ಕಾಗಿ ಅವಶ್ಯ ಎಂದು ತೋರುವಂಥ, ಆದರೆ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಂಥ ಯಾವುದೇ ಆದೇಶವನ್ನು ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಮಾಡಬಹುದು:

ಪರಂತು, ಅಂಥ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಸಾಧ್ಯವಾದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡತಕ್ಕದ್ದು.

**18. ನಿರಸನ ಮತ್ತು ಉಳಿಸುವಿಕೆ.–** (1) ಸಮಾನ ಪರಿಶ್ರಮಧನ ಅಧ್ಯಾದೇಶ, 1975ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನವಿದ್ದಾಗ್ಯೂ, ಹಾಗೆ ನಿರಸಿತವಾದ ಸದರಿ ಅಧ್ಯಾದೇಶದ ಮೇರೆಗೆ (ಅದರ ಮೇರೆಗೆ ಮಾಡಲಾದ ಯಾವುದೇ ಅಧಿಸೂಚನೆ, ನಾಮನಿರ್ದೇಶನ, ನೇಮಕ, ಆದೇಶ ಅಥವಾ ನಿರ್ದೇಶನವೂ ಸೇರಿದಂತೆ) ಮಾಡಿದ ಯಾವುದೇ ಕಾರ್ಯವನ್ನು ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಅಂಥ ಕಾರ್ಯವನ್ನು ಮಾಡಿದಾಗ ಅಥವಾ ಕ್ರಮವನ್ನು ಕೈಗೊಂಡಾಗ ಈ ಅಧಿನಿಯಮವು ಜಾರಿಯಲ್ಲಿದ್ದರೆ ಹೇಗೋ ಹಾಗೇ ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಮಾಡಲಾಗಿದೆಯೆಂದು ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು.